ಶ್ರೀ ಎಂ. ಪಿ. ಪ್ರಕಾಶ್.—ಪೂರಕವಾಗಿರತಕ್ಕ ಪ್ರಶ್ನೆಗಳನ್ನು ಕೇಳಿದರೆ ಉತ್ತರವನ್ನು ಕೊಡುವುದಕ್ಕೆ ಸಾಧ್ಯ. ಅದನ್ನು ಬಿಟ್ಟು ಅವರ ಮನಸ್ಸಿನಲ್ಲಿರುವಂಥದ್ದೆನ್ನೆಲ್ಲಾ ಕೇಳುವುದಾದರೆ ಉತ್ತರ ಕೊಡುವುದು ಕಷ್ಟವಾಗುತ್ತದೆ. ಪ್ರಜಾವಾಣಿಯಲ್ಲಿ ಬಂದಿರತಕ್ಕ ಜಾಹೀರಾತನ್ನು ನೋಡಿಲ್ಲದೆ ಎಂತಹ ಅಸಮರ್ಥರಿದ್ದೀರಿ ಎಂಬುದಾಗಿ ನಮಗೆ ಒಂದು ಕಡೆ ಹೇಳುತ್ತಾರೆ, ಅದೇ ಮಾನ್ಯ ಸದಸ್ಯರು, ಹಿರಿಯ ಸಚಿವರಾದ ಶ್ರೀ ವಿಮಾನ್ ರಾಚಯ್ಯನವರು ಸಂಕ್ಷಿಪ್ತವಾಗಿ ಪ್ರಶ್ನೆಯನ್ನು ಕೇಳಿ ಆದಾಗ ಪ್ರಕಾಶ್‌ರವರು ಸಮರ್ಥರಿದ್ದಾರೆ ಎಂಬುದಾಗಿ ಹೇಳುತ್ತಾರೆ. ಇದರಿಂದ ಅವರೇ ನೇರವಾಗಿ ಯಾವ ಪ್ರಶ್ನೆಯನ್ನು ಕೇಳಬೇಕೆಂಬುದರಲ್ಲಿ ಒಂದು ನಿಲುವನ್ನು ತಾಳದೆ ದ್ವಿಮುಖ ನೀತಿಯನ್ನು ಅನುಸರಿಸುತ್ತಿದ್ದಾರೆ.

ಶ್ರೀ ಆರ್. ವೆಂಕಟರಾಮಯ್ಯ.—ಇದರಲ್ಲಿ ನೀವು ಶಾಮಿಲಾಗಿದ್ದೀರಿ ಎಂದು ಹೇಳುತ್ತಿದ್ದೇನೆ. ಇದರಿಂದಾಗಿ ಖಾಸಗಿಯವರಿಗೆ ಸಾವಿರಾರು ಎಕರೆ ಭೂಮಿಯನ್ನು ಕೊಟ್ಟು ಅವರು ನಿವೇಶನ ಮಾಡಿ ಹೆಚ್ಚು ಹಣ ಸಂಪಾದನೆ ಮಾಡುವುದಕ್ಕೆ ದಾರಿ ಮಾಡಿ ಕೊಟ್ಟಿದ್ದೀರಿ ಎಂಬುದಾಗಿ ಹೇಳುತ್ತಿದ್ದೇವೆ. ಇದಕ್ಕೆ ಉತ್ತರ ಹೇಳಿ.

ಶ್ರೀ ಎಂ. ಪಿ. ಪ್ರಕಾಶ್.—ಮಾನ್ಯ ಸದಸ್ಯರ ಸವಾಲನ್ನು ನಾನಂ ಸ್ವೀಕರಿಸುತ್ತಿದ್ದೇನೆ. ಇದನ್ನು ಅರ್ಧ ಗಂಟೆ ಚರ್ಚೆಗೆ ಪರಿವರ್ತನೆ ಮಾಡಿ, ಅವರು ಯಾವ್ಯಾವ ಅಪಾದನೆಗಳನ್ನು ಮಾಡುತ್ತಾರೋ ಅದಕ್ಕೆ ಸಮರ್ಥ ರೀತಿಯಲ್ಲಿ ಉತ್ತರ ಕೊಡುವುದಕ್ಕೆ ತಯಾರಿದ್ದೇನೆ.

ಉಪಾಧ್ಯಕ್ಷರು —ಆಗಬಹುದು ಮಾನ್ಯ ಧರ್ಮಪ್ಪನವರೇ ತಮ್ಮ ಪ್ರಶ್ನೆಯನ್ನು ಮುಂದೂಡಲಾಗಿದೆ.

ಹಿಟ್ಟಣಿಗಿ ಗ್ರಾಮದಲ್ಲಿ ಕಂಡಿಯುವ ನೀರಿನ ಯೋಜನೆಯನ್ನು ಪೂರ್ಣಗೊಳಿಸುವುದು

೧೧೭೭. ಶ್ರೀ ಶಿವಾನಂದ ಎಚ್. ಕೌಜಲಗಿ, (ಬೈಲಹೊಂಗಲ) — ಮಾನ್ಯ ಗ್ರಾಮೀಣಾಭಿವೃದ್ಧಿ ಪಂಚಾಯತ್ ರಾಜ್ ಹಾಗೂ ಪಕ್ಷ್ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಬೆಳಗಾವಿ ಜಿಲ್ಲೆ ಸವದತ್ತಿ ತಾಲ್ಲೂಕಿನ ಹಿಟ್ಟಣಿಗಿ ಗ್ರಾಮಕ್ಕೆ ಎನ್,ಆರ್,ಡಬ್ಲ್ಯೂ,ಎಸ್. ಯೋಜನೆಯು ಯಾವಾಗ ಮಂಜೂರು ಆಯಿತು?

ಆ) ಆ ಯೋಜನೆಗೆ ಮಂಜೂರಾದ ಹಣವೆಷ್ಟು ಮತ್ತು ಈಗ ಕಾಮಗಾರಿಯು ಯಾವ ಹಂತದಲ್ಲಿದೆ?

ಇ) ಆ ಕೆಲಸವನ್ನು ಪೂರ್ಣ ಮುಗಿಸಲು ಸರ್ಕಾರದವರು ಯಾವ ಕ್ರಮವನ್ನು ಕೈಗೊಂಡಿರುವರು?

ಶ್ರೀ ಅಬ್ದುಲ್ ನಜೀರ್ ಸಾಬ್ (ಗ್ರಾಮೀಣಾಭಿವೃದ್ಧಿ ಪಂಚಾಯತ್ ರಾಜ್ ಹಾಗೂ ಪಕ್ಷ್ ಮಂತ್ರಿಗಳು)

ಅ) ದಿನಾಂಕ ೧೬-೫-೧೯೮೭ರಂದು ಮಂಜೂರಾಗಿದೆ

ಆ) ಮಂಜೂರಾದ ಹಣ ರೂ. ೮,೭೯,೩೦೦ ಯಾತ ನೀರಾವರಿ ಯೋಜನೆಯ ಜಾಕ್‌ವೆಲ್ ಜಲಮೂಲವನ್ನಾಗಿ ಪರಿಗಣಿಸಲಾಗಿದೆ. ಪೈಪ್‌ಲೈನಿನ ಕೆಲಸ ಪ್ರಗತಿಯಲ್ಲಿದೆ. ಮೇಲ್ಮಟ್ಟದ ಜಲಾಶಯದ ಕೆಲಸ ಪ್ರಾರಂಭಿಸಲು ಕ್ರಮ ತೆಗೆದುಕೊಳ್ಳಲಾಗಿದೆ,

ಇ) ಯೋಜನೆಗೆ ಫೆಬ್ರುವರಿ ೮೮ರ ಅಂತ್ಯದವರೆಗೆ ೪೨,೦೦೦ ರೂಪಾಯಿಗಳು ಖರ್ಚಾಗಿರುತ್ತದೆ. ೮೭-೮೮ನೇ ಆಯವ್ಯಯ ಪಟ್ಟಿಯಲ್ಲಿ ೨,೮೨೦೦೦ ರೂಪಾಯಿಗಳ ಅನುದಾನ ಲಭ್ಯವಿರುತ್ತದೆ. ೮೮-೮೯ನೇ ಸಾಲಿನ ಆಯವ್ಯಯ ಪಟ್ಟಿಯಲ್ಲಿ ಯೋಜನೆಯನ್ನು ಪೂರ್ಣಗೊಳಿಸಲು ಬೇಕಾಗುವಷ್ಟು ಹಣವನ್ನು ಒದಗಿಸಿ ೧೯೮೯ರ ಅಂತ್ಯದೊಳಗೆ ಯೋಜನೆ ಕಾರ್ಯಗತ ಮಾಡಲು ಉದ್ದೇಶಿಸಲಾಗಿದೆ.

ಶ್ರೀ ಎಸ್. ಎಚ್. ಕಾಜಲಗಿ.— ಈ ಕೆಲಸವನ್ನು ತೆಗೆದುಕೊಳ್ಳಲಿಕ್ಕೆ ೧೯೮೨ನೇ ಸಾಲಿನ ಆಯ್ ವ್ಯಯದಲ್ಲೇ ಸೇರಿಸಲಾಗಿತ್ತು. ಆದರೆ ಇದಕ್ಕೆ ಆಡಳಿತಾತ್ಮಕ ಮಂಜೂರಾತಿ ಕೊಟ್ಟಿದ್ದಾದು ೧೯೮೩ರಲ್ಲಿ ಎಂದರೆ ಆಡಳಿತಾತ್ಮಕ ಮಂಜೂರಾತಿಯನ್ನು ಕೊಡುವುದಕ್ಕೆ ೫ ವರ್ಷಗಳು ಹಿಡಿಯಿತು. ಆದರೆ ಈ ಕೆಲಸ ಇವತ್ತಿನವರೆಗೂ ಪ್ರಾರಂಭವಾಗಿಲ್ಲ. ಮೊನ್ನೆ ನಾನು ಈ ಪ್ರಶ್ನೆಯನ್ನು ಕಳುಹಿಸಿದ ಮೇಲೆ ಕೇವಲ ೪೨ ಸಾವಿರ ರೂಪಾಯಿಗಳ ಪೈಪಿನ ಖರ್ಚನ್ನು ತೋರಿಸಿದ್ದಾರೆ. ಒಂದು ಕೆಲಸವನ್ನು ಆಯ್ವ್ಯಯದಲ್ಲಿ ಸೇರಿಸಿದ ಮೇಲೆ ಆಡಳಿತಾತ್ಮಕ ಮಂಜೂರಾತಿ ಮತ್ತು ತಾಂತ್ರಿಕ ಮಂಜೂರಾತಿ ದೊರೆಯಬೇಕಾದರೆ ೭-೮ ವರ್ಷಗಳು ಹಿಡಿದರೆ, ಇನ್ನು ಆ ಯೋಜನೆ ಮುಗಿಯುವುದು ಯಾವಾಗ? ಇದೊಂದು ರೀಹ್ಯಾಬಿಲಿಟೇಷನ್ ಗ್ರಾಮ. ಈ ಗ್ರಾಮಕ್ಕೆ ಇವತ್ತಿನವರೆಗೂ ಟ್ಯಾಂಕ್ಹರ್‌ನಿಂದ ನೀರನ್ನು ಕೊಡಲಾಗುತ್ತಿವೆ. ಈ ರೀತಿ ಇನ್ನೆಷ್ಟು ದಿವಸ ನೀರನ್ನು ಕೊಡುವುದಕ್ಕೆ ಸಾಧ್ಯ? ಆದ ಕಾರಣ ಈ ಯೋಜನೆಯನ್ನು ಬೇಗನೆ ಮುಗಿಯುವುದಕ್ಕೆ ಮಾನ್ಯ ಮಂತ್ರಿಗಳು ಪ್ರಯತ್ನ ಮಾಡಬೇಕು.

ಶ್ರೀ ಅಬ್ದುಲ್ ನಜೀರ್ ಸಾಬ್.— ಇದು ೧೯೮೨ರಲ್ಲಿ ಮಂಜೂರಾಗಿದ್ದು ನಿಯಮಾನುಸಾರ ಇದಕ್ಕೆ ಹಣವನ್ನು ಒದಗಿಸಿಲ್ಲ. ೧೯೮೭ರಲ್ಲಿ ಆಡಳಿತಾತ್ಮಕ ಹಾಗೂ ತಾಂತ್ರಿಕ ಮಂಜೂರಾತಿ ಆಗಿದೆ. ೨ ಲಕ್ಷ ೮೮ ಸಾವಿರ ರೂಪಾಯಿಗಳನ್ನು ನಾವು ಈವರೆಗೆ ಕೊಟ್ಟಿದ್ದೇವೆ. ಅಲ್ಲಿ ನಾವು ಜಲಮೂಲವನ್ನು ಗುರುತಿಸಬೇಕು. ಆ ಭಾಗದಲ್ಲಿ ಏತ ನೀರಾವರಿಯಲ್ಲಿ ಏನು ನೀರು ಸಿಗುತ್ತಿದೆ ಅದನ್ನೇ ಕುಡಿಯುವ ನೀರಿನ ಯೋಜನೆಗೂ ಉಪಯೋಗಿಸಬೇಕೆಂದು ನೀರಾವರಿ ಇಲಾಖೆಗೆ ಪ್ರಾರ್ಥನೆಯನ್ನು ಸಲ್ಲಿಸಲಾಯಿತು. ಅವರೂ ಈ ಬಗ್ಗೆ ಒಪ್ಪಿದ್ದಾರೆ. ಇದರಿಂದಾಗಿ ನಿಧಾನ ಸ್ವಲ್ಪ ಆಗಿದೆ. ೧೯೮೯ರ ಅಂತ್ಯ ದೊಳಗೆ ಈ ಕಾರ್ಯವನ್ನು ನಾನು ಮುಗಿಸಿಕೊಡುತ್ತೇವೆ.

ಕೃಷಿಕರಿಗೆ ನಿವೇಶನ ನಿಗಧಿ

೮೭೦. ಶ್ರೀ ಬಿ. ಆರ್. ನೀಲಕಂಠಪ್ಪ (ತರೀಕೆರೆ).—ಮಾನ್ಯ ನಗರಾಭಿವೃದ್ಧಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ೧೯೮೬-೮೭ನೇ ಸಾಲಿನಲ್ಲಿ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದಿಂದ ಎಷ್ಟು ನಿವೇಶನ ಗಳನ್ನು ಹಂಚಲಾಗಿದೆ?

ಆ) ಯಾವ್ಯಾವ ವರ್ಗಕ್ಕೆ ಹಂಚಲಾಗಿದೆ?

ಇ) ನಿವೇಶನಗಳನ್ನು ಹಂಚುವಲ್ಲಿ ರಾಜ್ಯದಲ್ಲಿನ ಕೃಷಿಕರಿಗೆ ಇಂತಿಷ್ಟು ನಿವೇಶನಗಳನ್ನು ನಿಗಧಿ ಪಡಿಸುವ ಯೋಜನೆ ಇದೆಯೇ?

ಶ್ರೀ ಎಂ. ಪಿ. ಪ್ರಕಾಶ್ (ಬೆಂಗಳೂರು ಅಭಿವೃದ್ಧಿ ವಾರ್ತಾ ಮತ್ತು ಪ್ರವಾಸೋದ್ಯಮ ಸಚಿವರು).—

ಅ) ವಿವರಗಳು ಈ ಕೆಳಕಂಡಂತಿವೆ :—

೧. ಮೇ ೮೭ರ ಪ್ರಕಟಣೆ — ೧೯೧೫ ನಿವೇಶನಗಳು
೨. ಡಿಸೆಂಬರ್ ೮೭ರ ಪ್ರಕಟಣೆ — ೫೩೪೬ ನಿವೇಶನಗಳು
೩. ಜನವರಿ ೮೭ರ ಪ್ರಕಟಣೆ — ೪೮೧೩ ನಿವೇಶಗಳು
೪. ಏಪ್ರಿಲ್ ೮೭ರ ಪ್ರಕಟಣೆ — ೧೯೪೨ ನಿವೇಶನಗಳು
೫. ಜುಲೈ ೮೭ರ ಪ್ರಕಟಣೆ — ೩೦೦೦ ನಿವೇಶನಗಳು

ಆ) ವಿವರಗಳು ಈ ಕೆಳಕಂಡಂತಿವೆ :—

೧. ಹಿಂದುಳಿದ ವರ್ಗಗಳು
೨. ಪರಿಶಿಷ್ಟ ಜಾತಿ